
# ಐ.ಸಿ.ಎ.ಆರ್. ತರಳಬಾಳು ಕೃಷಿ ವಿಜ್ಞಾನ ಕೇಂದ್ರ
## ದಾವಣಗೆರೆ



# ಗಾಂಧೀಜಿಯವರ ಅಭಿವೃದ್ಧಿ ಮಾದರಿ
## ಒಂದು ಅವಲೋಕನ

ಅಕ್ಟೋಬರ್ – 2014




**ರಘುರಾಜ ಜೆ.**
ವಿಷಯ ತಜ್ಞರು (ಕೃಷಿ ವಿಸ್ತರಣೆ)

**ಡಾ|| ದೇವರಾಜ ಟಿ. ಎನ್.**
ಕಾರ್ಯಕ್ರಮ ಸಂಯೋಜಕರು




ಆರ್ಥಿಕ ನೆರವು :
ನ್ಯಾಷನಲ್ ಕೌನ್ಸಿಲ್ ಆಫ್ ರೂರಲ್ ಇನ್ಸ್‌ಟಿಟ್ಯೂಟ್ಸ್
ಹೈದರಾಬಾದ್


ಬ್ರಿಟಿಷರ ಆಳ್ವಿಕೆಯಿಂದ ಭಾರತಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟ ಅಹಿಂಸೆಯ ಅವದೂತ ಮಹಾತ್ಮಾ ಗಾಂಧಿ, ಅಭಿವೃದ್ಧಿ ಕುರಿತು ತಮ್ಮದೇ ಆದ ಕಲ್ಪನೆಯನ್ನು ಹೊಂದಿದ್ದರು, ಹಳ್ಳಿಗಳ ದೇಶದಲ್ಲಿರುವ ಜನತೆಯ ಅವಶ್ಯಕತೆ, ಆಶೋತ್ತರಗಳ ಬಗ್ಗೆ ಮಹಾತ್ಮಾ ಗಾಂಧೀಜಿಯವರು ಸಮಗ್ರ ದೃಷ್ಟಿಕೋನವನ್ನು ಹೊಂದಿದ್ದರು. ನೈತಿಕ ಹಾಗೂ ಧಾರ್ಮಿಕ ಮೌಲ್ಯಗಳನ್ನು ಆರ್ಥಿಕ ಧ್ಯೆಯಗಳೊಂದಿಗೆ ಅವರು ಸಂಯೋಜನೆ ಮಾಡಿದ್ದು, ವ್ಯಕ್ತಿಯ ಹಾಗೂ ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಅವರು ನೀಡಿದ ಕಾಣಿಕೆ ಗಮನಾರ್ಹ.

## ಗಾಂಧೀಜಿಯವರ ಅಭಿವೃದ್ಧಿ ಮಾದರಿಯು ಈ ಕೆಳಕಂಡ ಮೂಲನಂಬಿಕೆಗಳನ್ನು ಆಧರಿಸಿದೆ

ಅ. ಕೇವಲ ಹಳ್ಳಿಗಳಲ್ಲಿ ಮಾತ್ರ ನಿಜವಾದ ಭಾರತವನ್ನು ಕಾಣಬಹುದೇ ಹೊರತು ನಗರ ಅಥವಾ ಪಟ್ಟಣಗಳಲ್ಲಲ್ಲ – ಸುಮಾರು 593731 ಕ್ಕೂ ಹೆಚ್ಚು ಹಳ್ಳಿಗಳಿರುವ (68.7% ಜನಸಂಖ್ಯೆ) ಭಾರತದಲ್ಲಿ ಯಾವುದೆ ಅಭಿವೃದ್ಧಿ ಹಳ್ಳಿಗಳ ಹೊರತಾಗಿದ್ದರೆ, ಸುಸ್ಥಿರ ಮತ್ತು ಸಮತೋಲನವುಳ್ಳ ಅಭಿವೃದ್ಧಿಯಾಗಲು ಸಾಧ್ಯವಿಲ್ಲ. ಸ್ವಾತಂತ್ರ್ಯದ ನಂತರದ ಸಾಲು ಸಾಲು ಅಭಿವೃದ್ಧಿ ಯೋಜನೆಗಳು (ಪಂಚವಾರ್ಷಿಕ ಯೋಜನೆಗಳ ಮುಖಾಂತರ) ಗ್ರಾಮೀಣ ಪ್ರದೇಶದಲ್ಲಿ ಎಲ್ಲಾ ಜನಾಂಗಗಳ ಒಳಗೊಂಡ ಅಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಎಲ್ಲಾ ಯೋಜನೆಗಳಿಗೂ ಗಾಂಧೀಜಿಯವರ ಹಳ್ಳಿಗಳ ಅಭಿವೃದ್ಧಿಯ ಬಗ್ಗೆ ಹೊಂದಿದ್ದ ನಿಲುವು ಪ್ರೇರೆಪಣೆಯಾಗಿದೆ.

ಆ. ಗ್ರಾಮಗಳ ಮತ್ತು ಗ್ರಾಮಸ್ಥರ ಮೇಲೆ ಪಟ್ಟಣಿಗರಿಂದ ಆಗುತ್ತಿರುವ ಶೋಷಣೆ ನಿಲ್ಲಬೇಕು – ಸ್ವಾತಂತ್ರ್ಯದ ನಂತರದ ಎಲ್ಲಾ ರೈತ ಚುಳುವಳಿಗಳು ಗ್ರಾಮಸ್ಥರ ಮೇಲಾಗುತ್ತಿರುವ ಶೋಷಣೆಯನ್ನು ಪ್ರತಿಭಟಿಸಲು ಎಂಬುದು ಗಮನಾರ್ಹ, ಅನೇಕ ಕ್ರಾಂತಿಕಾರಿ ಬದಲಾವಣೆಗಳು ಸಹ ಈ ರೀತಿಯ ಹೋರಾಟಗಳಿಂದಲೇ ಸಾಧ್ಯವಾಗಿದೆ.






ಇ. ಜನತೆಯ ಕನಿಷ್ಠ ಅಥವಾ ಮೂಲಭೂತ ಅವಶ್ಯಕತೆಗಳು ಮೊದಲಿಗೆ ಪೂರ್ಣವಾಗಬೇಕು – ಗ್ರಾಮೀಣ ಮೂಲಭೂತ ಸೌಕರ್ಯದ ಬಗ್ಗೆ ಗಾಂಧೀಜಿಯವರು ಅತ್ಯಂತ ಕಳಕಳಿ ಹೊಂದಿದ್ದರು, ಗ್ರಾಮೀಣ ರಸ್ತೆಗಳು, ನೈರ್ಮಲ್ಯತೆ, ಶೌಚಾಲಯಗಳು, ಪಂಚಾಯತ್‌ರಾಜ್ ಸಂಸ್ಥೆಗಳು, ಶಾಲಾ–ಕಾಲೇಜುಗಳನ್ನು ಹಳ್ಳಿಗಳಲ್ಲಿ ಕಾಣಬಯಸಿದ್ದರು.

ಈ. ದೈಹಿಕ ಶ್ರಮದ ಕೆಲಸ ಪ್ರತಿಯೊಬ್ಬರಿಗೂ ಕಡ್ಡಾಯವಾಗಬೇಕು ಮತ್ತು ಅಂತಹ ಕೆಲಸದಿಂದಲೇ ಅವರು ಜೀವನಾವಶ್ಯವಾದ್ದನ್ನು ಸಂಪಾದಿಸಬೇಕು. ಆಗಲೇ ಪ್ರತಿಯೊಬ್ಬರೂ ಕರ್ತವ್ಯದ ನಿಜವಾದ ಗೌರವವನ್ನು ಅರ್ಥಮಾಡಿಕೊಳ್ಳುವುದು – 'Dignity of Labour' ಕರ್ತವ್ಯ ಗೌರವದ ಬಗ್ಗೆ ಗಾಂಧೀಜಿಯವರು ದೃಢ ನಿಲುವನ್ನು ಹೊಂದಿದ್ದರು, 'ವೈದ್ಯರು ಮಾಡುವುದು ಹೊಟ್ಟೆಗಾಗಿ ಮತ್ತು ಕ್ಷೌರಿಕನೂ ಮಾಡುವುದು ಹೊಟ್ಟೆಗಾಗಿ' ಎಂದು ಸಾರಿ ಹೇಳಿದ್ದರು. ಪ್ರತಿಯೊಬ್ಬರು ದೈಹಿಕ ಶ್ರಮದಿಂದ ದುಡಿಯಬೇಕು ಮತ್ತು ಗ್ರಾಮಗಳಲ್ಲಿ ಸಂಪತ್ಭರಿತ ರೈತರು ಇತರರನ್ನು ಶೋಷಿಸಬಾರದು ಎನ್ನುವುದು ಇದರ ಒಳ ಅರ್ಥ. ಪ್ರಸ್ತುತ ಕಾರ್ಮಿಕರ ಸಮಸ್ಯೆ ಇದೆ ಎಂದು ಹೇಳುವ ಜನರಿಗೆ ಇದು ಉತ್ತರವಾಗಬಹುದು.

ಉ. ಜನರು ದೇಶದಲ್ಲೇ ತಯಾರಾದ (ಸ್ವದೇಶಿ) ಸಾಮಗ್ರಿಗಳು ಮತ್ತು ಸಂಸ್ಥೆಗಳನ್ನೇ ಆಯ್ಕೆ ಮಾಡಿಕೊಳ್ಳಬೇಕು – ಈಗಲೂ ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧ ಹೋರಾಟ ಮಾಡುವ ಅಗತ್ಯ ಕಾಣುತ್ತಿದೆ. ಮತ್ತು ಗಾಂಧೀಜಿಯವರು ಇದರ ಬಗ್ಗೆ ಹಲವು ದಶಕಗಳ ಹಿಂದೆ ಕಾಯಕ ಮಾಡಿಕೊಂಡು ತಿಳಿಸಿದ್ದರು.







ಹಳ್ಳಿಯ ಆರ್ಥಿಕತೆಯು ಕೇವಲ ಹಳ್ಳಿಗಳಿಗಷ್ಟೇ ಸೀಮಿತವಾಗದೆ ಸಮಗ್ರವಾಗಿ ದೇಶದ ಸ್ವಾಲಂಬನೆಗೆ ಮುಖ್ಯ ಎನ್ನುವುದನ್ನು ಗಾಂಧೀಜಿಯವರ ಮಾದರಿಯು ಒತ್ತಿ ಹೇಳಿದೆ. ಅವಶ್ಯಕತೆ ಉಂಟಾದಾಗ, ಹಳ್ಳಿಗರು ತಾವು ಉತ್ಪಾದನೆ ಮಾಡಿದ ವಸ್ತುಗಳನ್ನು ಪಡೆದುಕೊಳ್ಳಬಹುದಿತ್ತು ಅಥವಾ ಕೊಳ್ಳಬಹುದಿತ್ತು. ದಿನೋಪಯೋಗಿ ವಸ್ತುಗಳನ್ನು ಉತ್ಪಾದಿಸುವ ಮತ್ತು ಎಲ್ಲರಿಗೂ ಉದ್ಯೋಗವನ್ನು ಒದಗಿಸುವ ಖಾದಿ ಮತ್ತು ಗ್ರಾಮೀಣ ಕೈಗಾರಿಕೆಗಳಿಗೆ ಪ್ರಾಮುಖ್ಯತೆ ನೀಡಲಾಗಿತ್ತು. ಸಾಬೂನು, ಕಾಗದ ಮತ್ತು ಲೋಹಗಳ ಉತ್ಪಾದನೆ, ಕೈಯಿಂದ ಕುಟ್ಟುವುದು, ಎಣ್ಣೆ ಕಾಳುಗಳನ್ನು ಅರೆಯುವುದು ಮತ್ತು ಅಂಥಹುದೇ ಇತರ ಕ್ರಿಯೆಗಳಿಗೆ ಅವು ಕೈಕೆಲಸಕ್ಕೆ ಹೆಚ್ಚು ಅವಕಾಶ ನೀಡುವ ಕಾರಣದಿಂದ ಪ್ರಾಧಾನ್ಯತೆಯನ್ನು ಕಲ್ಪಿಸಲಾಗಿತ್ತು. ಯಂತ್ರಗಳು ಮಾನವ ಸಂಪನ್ಮೂಲವನ್ನು ನಿರರ್ಥಕ ಮಾಡುವುದೆಂಬ ಆಲೋಚನೆಯನ್ನು ಅವರು ಹೊಂದಿದ್ದರೂ, ಉದ್ಯೋಗವನ್ನು ಸೃಷ್ಟಿಸುವ ಅಥವಾ ಉದ್ಯೋಗಗಳಿಗೆ ಕುತ್ತು ತಾರದ ತಂತ್ರಜ್ಞಾನಗಳನ್ನು ಅವರು ಒಪ್ಪಿಕೊಳ್ಳುತ್ತಿದ್ದರು.

ಆರ್ಥಿಕ ಮತ್ತು ರಾಜಕೀಯ ತತ್ವಗಳಲ್ಲಿ ಅತ್ಯುತ್ತಮವಾದ ಸೂತ್ರವೆಂದರೆ ಆರ್ಥಿಕ ಶಕ್ತಿಗಳ ವಿಕೇಂದ್ರೀಕರಣ. ಪಂಚಾಯತ್‌ರಾಜ್ ಸಂಸ್ಥೆಗಳನ್ನು ಪ್ರಾರಂಭಿಸುವ ಮೂಲಕ ಇದನ್ನು ಸಾಧಿಸ ಬಹುದೆಂಬುದು ಅವರ ಅಭಿಪ್ರಾಯವಾಗಿತ್ತು.

ಪ್ರತಿಯೊಂದು ಹಳ್ಳಿಯೂ ತನ್ನ ಆರ್ಥಿಕತೆಯನ್ನು ನಿರ್ವಹಿಸುವುದಕ್ಕೋಸ್ಕರ ಕಾರ್ಯಾಂಗ, ನ್ಯಾಯಾಂಗ ಮತ್ತು ಶಾಸಕಾಂಗದ ಎಲ್ಲಾ ಅಧಿಕಾರಿಗಳನ್ನೂ ಹೊಂದಬೇಕು, ತನ್ನ ಎಲ್ಲಾ ಕಾರ್ಯಚಟುವಟಿಕೆಗಳನ್ನೂ ನಿರ್ವಹಿಸಲು ಸಾಧ್ಯವಾಗುವಂತಿರಬೇಕು. ಪ್ರತಿಯೊಂದು ಗ್ರಾಮವೂ ಆರೋಗ್ಯ, ನೈರ್ಮಲ್ಯ ಮತ್ತು ಶಿಕ್ಷಣ ಇವುಗಳೆಲ್ಲವನ್ನೂ ನೋಡಿಕೊಳ್ಳುವಂತಿದ್ದು, ಒಂದು ಗಣರಾಜ್ಯದಂತೆ ಕಾರ್ಯ ನಿರ್ವಹಿಸಬೇಕು ಎಂಬುದು ಗಾಂಧೀಜಿಯವರ ಅಭಿವೃದ್ಧಿ ಮಾದರಿಯ ಮೂಲ ತಂತ್ರವಾಗಿತ್ತು.

1992ರ 73ನೇಯ ಸಂವಿಧಾನ ತಿದ್ದುಪಡಿ ವಿಧೇಯಕವು ಪಂಚಾಯತ್‌ರಾಜ್ ಸಂಸ್ಥೆಗಳ ಮೂಲಕ ದೇಶದೆಲ್ಲೆಡೆ ಸ್ವಯಂ ಆಡಳಿತ ವ್ಯವಸ್ಥೆಯನ್ನು ಯೋಜಿಸಿತು, ಇದಕ್ಕೂ ಮುಂಚೆಯೇ ಅನೇಕ ರಾಜ್ಯಗಳು ವಿವಿಧ ರೀತಿಯಲ್ಲಿ ಚುನಾಯಿತ ಪಂಚಾಯತ್ ರಾಜ್ ಸಂಸ್ಥೆಗಳನ್ನು ಅನುಷ್ಠಾನಕ್ಕೆ ತಂದಿದ್ದವು. ಗ್ರಾಮೀಣ ಭಾರತದ ಅಭಿವೃದ್ಧಿಗೆ ಸಹಕಾರಿ ಪದ್ಧತಿಯು ಕಾರಣವಾಗುವುದೆಂಬ ನಂಬಿಕೆ ಗಾಂಧೀಜಿಯವರದಾಗಿತ್ತು. ಸಹಕಾರಿ ಕೃಷಿಯನ್ನೂ ಕೂಡ ಅವರು ಶಿಫಾರಸ್ಸು ಮಾಡುತ್ತಿದ್ದರು. ಸಹಕಾರಿ ಸಂಘಸಂಸ್ಥೆಗಳು, ನೇಕಾರರ ಹಾಗೂ ಹಾಲು ಉತ್ಪಾದಕರ ಮತ್ತು ಮಾರಾಟಗಾರರ ಸಹಕಾರಿ ಸಂಘಗಳು ಲೇವಾದೇವಿ ಮಾಡುವ ಸಾಹುಕಾರರ ಕಪಿಮುಷ್ಟಿಯಿಂದ ಬಿಡುಗಡೆ ಮಾಡಿ ಗ್ರಾಮೀಣ ಜನರಿಗೆ ನವಜೀವನ ನೀಡುವುದೆಂದು ಭಾವಿಸಿದ್ದರು. ಸಾಕಷ್ಟು ಸಂಖ್ಯೆಯಲ್ಲಿ ಸಹಕಾರಿ ಸಂಘಗಳು ಮತ್ತು ಬ್ಯಾಂಕುಗಳು ಭಾರತದಲ್ಲಿ ಇದ್ದರೂ, ಲೇವಾದೇವಿದಾರರು ನಿರಂತರವಾಗಿ ಗ್ರಾಮೀಣ ಜನತೆಯ ಶೋಷಣೆ ಮಾಡುತ್ತಾರೆ. ಮನುಷ್ಯ, ಮನುಷ್ಯನ ಮೇಲೆ ನಡೆಸುವ ಶೋಷಣೆಯನ್ನು ಧರ್ಮದರ್ಶಿತನವು ನಿಲ್ಲಿಸುತ್ತದೆ ಎಂದು ಗಾಂಧೀಜಿಯವರು ಭಾವಿಸಿದ್ದರು. ಭೂಮಿಯೂ ಸೇರಿದಂತೆ ಎಲ್ಲಾ ನೈಸರ್ಗಿಕ ಸಂಪನ್ಮೂಲಗಳೂ ಸಾಮುದಾಯಿಕ ಒಡೆತನದಲ್ಲಿರಬೇಕೆಂದೂ, ಅದರಿಂದ ಸಂಪೂರ್ಣ ಸಮುದಾಯಕ್ಕೆ ಅನುಕೂಲವಾಗಬೇಕೆಂದು ಅವರು ಭಾವಿಸಿದ್ದರು. ಶ್ರೀಮಂತ ಜನರು ಸಮಾಜದಲ್ಲಿ ಧರ್ಮದರ್ಶಿಗಳಂತೆ ನಡೆದುಕೊಂಡು, ಬಡವರು ಸಾಂಘಿಕವಾಗಿ ಬೆಳೆಯಲು ಸಹಾಯ ಮಾಡುವ ಆಶಯ ಅವರದಾಗಿತ್ತು.

ಆಧುನಿಕ ಶಿಕ್ಷಣ ವ್ಯವಸ್ಥೆಯನ್ನು ಮಹಾತ್ಮ ಗಾಂಧಿಯವರು ಒಪ್ಪುತ್ತಿರಲಿಲ್ಲ. ದಿನನಿತ್ಯದ ಜೀವನಕ್ಕೆ ಸಂಗತವಾದ ಶಿಕ್ಷಣವನ್ನು ಅವರು ಸಮರ್ಥಿಸುತ್ತಿದ್ದರೇ ಹೊರತು, ಕೇವಲ ಮಾಹಿತಿಯ ಸಂಗ್ರಹಣೆಯನ್ನಲ್ಲ. ಅವರ ಪ್ರಕಾರ, ಶಿಕ್ಷಣ ವ್ಯವಸ್ಥೆಯು ಯುವ ಮನಸ್ಸುಗಳ ಸಂಪೂರ್ಣ ಸಾಮರ್ಥ್ಯವನ್ನು ಮತ್ತು ಕೌಶಲ್ಯಗಳನ್ನು ಅರಳಿಸುವಂತಿರಬೇಕು. ಸ್ವಾವಲಂಬನೆ ಮತ್ತು ಉನ್ನತ ನೈತಿಕತೆಯಡೆಗೆ ಲಕ್ಷ್ಯವಿಟ್ಟ ಕಾರ್ಯಶೀಲವಾದ ಶಿಕ್ಷಣ ಅವರದ್ದಾಗಿತ್ತು. ಇದನ್ನು ಅವರು 'ಹೊಸ ಶಿಕ್ಷಣ' ಎಂದು ಕರೆದರು. ಗಾಂಧೀಜಿಯವರ ಆರ್ಥಿಕ ತತ್ವಾದರ್ಶಗಳ ಮೂಲ ಆಧಾರ 'ಜನರಾಶಿಯಿಂದ ಉತ್ಪಾದನೆ, ಉತ್ಪಾದನೆಯ ರಾಶಿಯಲ್ಲ' (Production by the Masses and not Mass Production) ಎಂಬುದಾಗಿತ್ತು.





ಗಾಂಧೀಜಿಯವರ ಮಾದರಿಯನ್ನು ಹೊಗಳುವವರೂ, ತೆಗಳೂವವರೂ ಇದ್ದಾರೆ. ಮೊದಲನೆ ಮಹಾಯುದ್ಧದ ನಂತರ, ವಿಶ್ವವು ಹೆಚ್ಚು ಹೆಚ್ಚಾಗಿ ತಂತ್ರಜ್ಞಾನ ಅಭಿಮುಖಿಯಾಗಿರುವುದರಿಂದ, ಈ ಮಾದರಿ ಹಳತಾಗಿದೆ, ಅಪ್ರಸ್ತುತವಾಗಿದೆ ಎಂಬುದು ಕೆಲವು ಜನರ ಅಭಿಪ್ರಾಯ. ತಂತ್ರಜ್ಞಾನಗಳನ್ನು ಹೊಂದಿದ ದೇಶಗಳು ಕೇವಲ ಸಂಪನ್ಮೂಲಗಳನ್ನು ಹೊಂದಿದ ದೇಶಗಳ ಮೇಲೆ ಪ್ರಭುತ್ವ ಪಡೆದು ಅವುಗಳನ್ನು ಕೊನೆಯಿಲ್ಲದಂತೆ ಶೋಷಿಸಿದವು. ಗಾಂಧೀಜಿಯವರ ಮಾದರಿಯನ್ನು ಅನುಸರಿಸಿದರೆ, ತಂತ್ರಜ್ಞಾನದ ಅಂತರ ಹೆಚ್ಚುತ್ತಲೇ ಹೋಗುವುದೆಂದೂ, ಶ್ರೀಮಂತ ರಾಷ್ಟ್ರಗಳು ಬಡದೇಶಗಳನ್ನು ಕೊಳ್ಳೆ ಹೊಡೆಯುವುದು ಮುಂದುವರಿಸುತ್ತಲೇ ಹೋಗುವುದೆಂದು ಅವರ ವಾದ. ಆದಾಗ್ಯೂ ದೇಶದ ಪರಿಸ್ಥಿತಿಯನ್ನು ಅರಿತ ಧೀಮಂತ ನಾಯಕರು ಗಾಂಧೀಜಿಯವರ ಮಾದರಿಯನ್ನು ಆಧಾರಿತ ಯೋಜನೆಗಳನ್ನು ಹಮ್ಮಿಕೊಂಡಿದ್ದಾರೆ. ಎಲ್ಲೋ ಒಂದೆಡೆ ಈ ಯೋಜನೆಗಳ ಜೊತೆಗೆ ತಂತ್ರಜ್ಞಾನ ಅಭಿವೃದ್ಧಿಪಡಿಸುವ ಯೋಜನೆಗಳ ಅವಶ್ಯಕತೆಯು ಇದ್ದು, ಇವೆರಡನ್ನು ಒಳಗೊಂಡ ಯೋಜನೆಗಳನ್ನು ಅನುಷ್ಠಾನಕ್ಕೆ ತರುವುದು ಕೂಡ ಅಷ್ಟೆ ಅವಶ್ಯಕ. ಈ ಚರ್ಚೆ ಮುಂದುವರೆಯುತ್ತಲೇ ಇದೆ.


**ಸಂಪರ್ಕಿಸಿ :**

ಕಾರ್ಯಕ್ರಮ ಸಂಯೋಜಕರು

## ಐ.ಸಿ.ಎ.ಆರ್. ತರಳಬಾಳು ಕೃಷಿ ವಿಜ್ಞಾನ ಕೇಂದ್ರ

ಕದಳೀವನ, ಎಲ್.ಐ.ಸಿ. ಕಾಲೋನಿ ಲೇಔಟ್,

ಬಿ.ಐ.ಇ.ಟಿ. ರಸ್ತೆ, **ದಾವಣಗೆರೆ-577004**

**ದೂರವಾಣಿ : 08192-263462, ಫ್ಯಾಕ್ಸ್ : 08192-260969**

ಮಿಂಚಂಚೆ : dvgtkvk@yahoo.com.,

ವೆಬ್ ಸೈಟ್ : www.taralabalukvk.com


ಅಶ್ವಿನಿ ಆಫ್‌ಸೆಟ್ ಪ್ರಿಂಟರ್ಸ್, ದಾವಣಗೆರೆ ಮೊ : 9845781782